ಕರ್ನಾಟಕ ಸರ್ಕಾರ

ಸಂಖ್ಯೆ:ಪಮೂಶಿಇ/ಶೈಶಾ/ಕ್ರೀಡೆ/ವಿವಿ/ರಾಜ್ಯಮಟ್ಟ/2013-14

ನಿರ್ದೇಶಕರ ಕಛೇರಿ,
ಪದವಿಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ:-2-09-2014.

ಗೆ;

ಉಪನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ,
ಕೊಡಗು ಜಿಲ್ಲೆ,
ಕೊಡಗು,

ಮಾನ್ಯರೆ:

ವಿಷಯ: 2013-14 ನೇ ಸಾಲಿನಲ್ಲಿ ರಾಜ್ಯಮಟ್ಟದ ಹಾಕಿ ಕ್ರೀಡಾ ಸ್ಪರ್ಧೆಯ ಖರ್ಚಿನ ಲೆಕ್ಕ ಪತ್ರಗಳ ಬಗ್ಗೆ,

ಉಲ್ಲೇಖ: ತಮ್ಮ ಪತ್ರ ಸಂಖ್ಯೆ ಎ1.ಪಮೂಶಿಇ.ಉ.ನಿ.ಕೊ.ಕ್ರೀ.ವೋ.2/2014-15, ದಿನಾಂಕ:04-04-2014

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2013-14 ನೇ ಸಾಲಿನಲ್ಲಿ ಹಾಕಿ ಕ್ರೀಡಾ ಸ್ಪರ್ಧೆಯನ್ನು ರಾಜ್ಯಮಟ್ಟದಲ್ಲಿ ನಡೆಸಲು ನಿರ್ದೇಶನಾಲಯದ ಕ್ರೀಡಾ ಶಾಖೆಯಿಂದ 9,55,000-00 ರೂಗಳನ್ನು ನಿಮಗೆ ಆನ್‌ಲೈನ್ ಮುಖಾಂತರ ಬಿಡುಗಡೆ ಮಾಡಲಾಗಿತ್ತು, ನೀವು ಹಾಕಿ ಕ್ರೀಡಾ ಸ್ಪರ್ಧೆಯನ್ನು ನಡೆಸಿ ಕ್ರೀಡಾ ಸ್ಪರ್ಧೆಗೆ ಖರ್ಚು ಮಾಡಿರುವ 7,80,930-00 ರೂಗಳ ವೋಚರ್‌ಗಳನ್ನು ಹಾಗೂ ಉಳಿದ 1,74,070-00 ರೂಗಳ ಬೇಡಿಕೆ ಹುಂಡಿಯನ್ನು ಮೇಲಿನ ತಮ್ಮ ಉಲ್ಲೇಖ ಪತ್ರದ ಜೊತೆಯಲ್ಲಿ ಸಲ್ಲಿಸಿರುತ್ತೀರಿ.

ತಮ್ಮ ಲೆಕ್ಕ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತವೆ,

| ಕ್ರ ಸಂ | ಜಿಲ್ಲೆಯ ಹೆಸರು | ತಂಡ | ತಪ್ಪಾಗಿ ವಿತರಿಸಿರುವ ವಿವರ | ಮೊತ್ತ | ಷರಾ |
|---|---|---|---|---|---|
| 1 | ಧಾರವಾಡ | ಬಾಲಕರು | ಮಹೇಶ್ ಪಿ ಜಿ | 1,352/- | ಜಿಲ್ಲಾ ಉಪನಿರ್ದೇಶಕರು ಕಳುಹಿಸಿರುವ ಪಟ್ಟಿಯಲ್ಲಿ ಈ ಹೆಸರಿರುವುದಿಲ್ಲ |
| 2 | ಹಾಸನ | ಬಾಲಕರು | ಯಶವಂತ್<br>ಫಬ್ಬ | 430/-<br>430/- | ಜಿಲ್ಲಾ ಉಪನಿರ್ದೇಶಕರು ಕಳುಹಿಸಿರುವ ಪಟ್ಟಿಯಲ್ಲಿ ಈ ಹೆಸರಿರುವುದಿಲ್ಲ |
| 3 | ದಕ್ಷಿಣ ಕನ್ನಡ | ಬಾಲಕಿಯರು | ಉಷಾ ಎ ಜೆ ತಂಡದ ವ್ಯವಸ್ಥಾಪಕರು | 542/- | ಜಿಲ್ಲಾ ಉಪನಿರ್ದೇಶಕರು ಕಳುಹಿಸಿರುವ ಪಟ್ಟಿಯಲ್ಲಿ ಈ ಹೆಸರಿರುವುದಿಲ್ಲ |
| 4 | ಉಡುಪಿ | ಬಾಲಕಿಯರು | ದೀಕ್ಷಾ<br>ರಮ್ಯ<br>ಆರತಿ<br>ಮುಕ್ತಿ<br>ಸುಮಲತ | 556/-<br>556/-<br>556/-<br>556/-<br>556/- | ಜಿಲ್ಲಾ ಉಪನಿರ್ದೇಶಕರು ಕಳುಹಿಸಿರುವ ಪಟ್ಟಿಯಲ್ಲಿ ಈ ಹೆಸರಿರುವುದಿಲ್ಲ |

Speed Post No: EK-466113233IN

3749
3-9-14

| | | | | | |
|---|---|---|---|---|---|
| 5 | ತುಮಕೂರು | ಬಾಲಕರು | ಮಂಜುನಾಥ ಎನ್ | 648/- | ಜಿಲ್ಲಾ ಉಪನಿರ್ದೇಶಕರ ಪಟ್ಟಿಯಲ್ಲಿ ಹೆಚ್ಚುವರಿಯಾಗಿಹೆಸರನ್ನು ಸೇರಿಸಿರುವುದು ಕಂಡುಬರುತ್ತದೆ. |
| 6 | ಕೊಡಗು | ಬಾಲಕರು | ಸಂತೋಷ್ ಎನ್ ಟಿ | 300/- | ಜಿಲ್ಲಾ ಉಪನಿರ್ದೇಶಕರು ಕಳುಹಿಸಿರುವ ಪಟ್ಟಿಯಲ್ಲಿ ಈ ಹೆಸರಿರುವುದಿಲ್ಲ |

ಈ ಮೇಲ್ಕಂಡಂತೆ, ತಪ್ಪಾಗಿ ವಿತರಿಸಿರುವ ರೂ.6,482/- ಗಳನ್ನು ಜಿಲ್ಲಾ ಉಪನಿರ್ದೇಶಕರುಗಳ ಪಟ್ಟಿಯಲ್ಲಿಲ್ಲದ ಹಾಗೂ ತುಮಕೂರು ಜಿಲ್ಲಾ ಉಪನಿರ್ದೇಶಕರ ಪಟ್ಟಿಯಲ್ಲಿ ಹೆಚ್ಚುವರಿಯಾಗಿ ಹೆಸರು ಸೇರಿಸಿರುವುದು ಕಂಡುಬಂದಿದ್ದು, ತಪ್ಪಾಗಿ ವಿತರಿಸಿರುವ ಮೊತ್ತ ರೂ 6,482/-(ಆರು ಸಾವಿರದ ನಾಲ್ಕು ನೂರ ಎಂಭತ್ತೆರಡು) ರೂಗಳಾಗಿದ್ದು, ಸದರಿ ಮೊತ್ತವನ್ನು ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು-12 ಇವರ ಹೆಸರಿಗೆ ಬೇಡಿಕೆ ಹುಂಡಿಯನ್ನು ಪಡೆದು ಇಲಾಖೆ ಕೂಡಲೇ ಪಾವತಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಶೈಶಾ-27/ಕ್ರೀಡೆ.ಅ.ಬಿ./2013-14

56

ನಿರ್ದೇಶಕರ ಕಚೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
ಮಲ್ಲೇಶ್ವರಂ, 18 ನೇ ಅಡ್ಡರಸ್ತೆ,
ಬೆಂಗಳೂರು-560012
ದಿನಾಂಕ: 8-09-2014

ಗೆ:
ಉಪನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
ದಾವಣಗೆರೆ ಜಿಲ್ಲೆ
ದಾವಣಗೆರೆ

ಮಾನ್ಯರೆ:

ವಿಷಯ: 2013-14 ನೇ ಸಾಲಿನ ಕ್ರೀಡಾ ಸ್ಪರ್ಧೆಯನ್ನು ರಾಜ್ಯಮಟ್ಟದಲ್ಲಿ ನಡೆಸಿದ ಕುರಿತು, ನಿಮಗೆ ಬಿಡುಗಡೆ ಮಾಡಿರುವ ಹಣವನ್ನು ಹಿಂದಿರುಗಿಸುವ ಬಗ್ಗೆ

ಉಲ್ಲೇಖ:1. ಈ ನಿರ್ದೇಶನಾಲಯದ ಪತ್ರ ಸಂಖ್ಯೆ ಪಪೂಶಿ/ಶೈಶಾ.27/ಹ.ಬಿ/2013-14 ದಿನಾಂಕ 25-10-2013
2.ತಮ್ಮ ಪತ್ರ ಸಂಖ್ಯೆ ಉನಿದ/ಸಿ3/ಕ್ರೀಕೂ/05/2013-14/670 ದಿನಾಂಕ4/2/2014

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಪತ್ರದಲ್ಲಿ ರಾಜ್ಯಮಟ್ಟದ ಜೂಡೋ ಸ್ಪರ್ಧೆಯನ್ನು ನಡೆಸಲು ನಿಮಗೆ 3,60,000/-ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು. ವಹಿಸಿದ ಸ್ಪರ್ಧೆಗಳನ್ನು ನೀವು ನಡೆಸಿ ಉಲ್ಲೇಖ(2)ರ ಪತ್ರದಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ವೆಚ್ಚ ಭರಿಸಲಾದ ಹಣದ ಲೆಕ್ಕವನ್ನು ಸಲ್ಲಿಸಿರುತ್ತೀರಿ. ನೀವು ಸಲ್ಲಿಸಿರುವ ಪ್ರಸ್ತಾವನೆ ಹಾಗೂ ಬಿಲ್ಲುಗಳನ್ನು ಪರಿಶೀಲಿಸಲಾಗಿದೆ. ತಾವು ಸಲ್ಲಿಸಿರುವ ಬಿಲ್ಲುಗಳನ್ನು ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ ಈ ನಿರ್ದೇಶನಾಲಯದಿಂದ ಸದರಿ ಬಾಬ್ತು ನಿಮಗೆ ಬಿಡುಗಡೆ ಮಾಡಲಾದ ಮೊತ್ತದಲ್ಲಿ 2,39,148/- ರೂ.ಗಳನ್ನು ಹಿಂದಿರುಗಿಸಿರುತ್ತೀರಿ. ಉಳಿದ ಮೊತ್ತ 1,20,852/-ರೂಗಳನ್ನೂ ಸಹ ಬೇಡಿಕೆ ಹುಂಡಿಯನ್ನು **ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು** ಇವರಿಗೆ ಸಲ್ಲುವಂತೆ ಪಡೆದು ಕೂಡಲೇ ಸಲ್ಲಿಸಲು ಸೂಚಿಸಲಾಗಿದೆ.

9/9/14

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ/ಕ್ರೀಡೆ/ಇಬಿ/ತಾರಾಜಿ/2014-15

ನಿರ್ದೇಶಕರ ಕಛೇರಿ,
ಪದವಿಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ:- -09-2014.
16/10/

ಗೆ:
ಉಪನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬಾಗಲಕೋಟೆ ಜಿಲ್ಲೆ
ಬಾಗಲಕೋಟೆ

ಮಾನ್ಯರೆ:

ವಿಷಯ: 2013-14 ರಾಜ್ಯಮಟ್ಟದ ಬಾಲ್ ಬ್ಯಾಡ್ಮಿಂಟನ್ ಕ್ರೀಡಾ ಸ್ಪರ್ದೆಯ ಹಾಗೂ ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾ ಸ್ಪರ್ದೆಗಳ ಲೆಕ್ಕ ಪತ್ರಗಳ ಬಗ್ಗೆ,

ಉಲ್ಲೇಖ: ತಮ್ಮ ಕಚೇರಿ ಪತ್ರ ಸಂಖ್ಯೆ:ಪಪೂಶಿಇಬಾ/ಎ5/ರಾಮ ಕ್ರೀಡಾಕೂಟ ರಸೀದಿ/2013-14/828. ದಿನಾಂಕ: 06-03-2014.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2013-14 ನೇ ಸಾಲಿನ ರಾಜ್ಯಮಟ್ಟದ ಬಾಲ್ ಬ್ಯಾಡ್ಮಿಂಟನ್ ಕ್ರೀಡಾ ಸ್ಪರ್ದೆಯನ್ನು ನಡೆಸಲು ಕ್ರೀಡಾ ಖಾತೆಯಿಂದ ತಾಲ್ಲೂಕು ಹಾಗೂ ಜಿಲ್ಲಾಮಟ್ಟಕ್ಕೆ ಒಟ್ಟು ರೂ 1,30,000-00 ಮತ್ತು ರಾಜ್ಯಮಟ್ಟಕ್ಕೆ ರೂ 4,60,000-00 ಗಳನ್ನು ಆನ್‌ಲೈನ್ ಮುಖಾಂತರ ಬಿಡುಗಡೆ ಮಾಡಲಾಗಿತ್ತು, ಸದರಿ ಸ್ಪರ್ದೆಗಳನ್ನು ನಡೆಸಿ ರೂ 4,76,516-00 ಗಳ ರಾಜ್ಯಮಟ್ಟದ ವೋಚರ್‌ಗಳನ್ನು ಮತ್ತು ರೂ 1,35,000-00 ಗಳ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ವೋಚರ್‌ಗಳನ್ನು ತಮ್ಮ ಉಲ್ಲೇಖ ಪತ್ರದನ್ವಯ ಸಲ್ಲಿಸಿರುತ್ತೀರಿ.

ಸದರಿ ವೋಚರ್‌ಗಳನ್ನು ಪರಿಶೀಲಿಸಲಾಗಿ ರಾಜ್ಯಮಟ್ಟದ ವೋಚರ್‌ಗಳು ರೂ 4,64,178-00 ಗಳನ್ನು ಸಲ್ಲಿಸಿದ್ದು, ರೂ 4,76,516-00 ರೂ ಗಳೆಂದು ತಪ್ಪಾಗಿ ತಿಳಿಸಿರುತ್ತೀರಿ, ಹಾಗೂ ನಿಮ್ಮ ಕಚೇರಿಯ ಸಿಬ್ಬಂದಿಗಳಿಗೆ ರೂ 5,000-00 ಗಳ ಸಂಭಾವನೆಯನ್ನು ನೀಡಿರುವ ವೋಚರ್‌ಗಳನ್ನು ಸಲ್ಲಿಸಿರುವುದಿಲ್ಲ, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದ ಲೆಕ್ಕಪತ್ರಗಳ ವೋಚರ್‌ಗಳಿಗೆ ಉಪನಿರ್ದೇಶಕರು ದೃಡೀಕರಿಸಬೇಕಾಗಿರುವುದರಿಂದ ಎಲ್ಲಾ ವೋಚರ್‌ಗಳನ್ನು ಕೇಂದ್ರ ಕಚೇರಿಗೆ ಖುದ್ದಾಗಿ ಬಂದು ದೃಢೀಕರಿಸಿ ಲೆಕ್ಕ ಪತ್ರಗಳನ್ನು ಇತ್ಯರ್ಥ ಪಡಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ/ಕ್ರೀಡೆ/ಪಿಪಿ/ತಾರಾಜಿ/2014-15

ನಿರ್ದೇಶಕರ ಕಛೇರಿ,
ಪದವಿಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ:- -09-2014.
16/10

ಗೆ:

ಉಪನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
ಮಂಡ್ಯ ಜಿಲ್ಲೆ
ಮಂಡ್ಯ

ಮಾನ್ಯರೆ:

ವಿಷಯ: 2013-14 ರಾಜ್ಯಮಟ್ಟದ ಕಬ್ಬಡಿ ಕ್ರೀಡಾ ಸ್ಪರ್ದೆಯ ಹಾಗೂ ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾ ಸ್ಪರ್ದೆಗಳ ಲೆಕ್ಕ ಪತ್ರಗಳ ಬಗ್ಗೆ,

ಉಲ್ಲೇಖ: 1. ಮಂಡ್ಯ ಜಿಲ್ಲಾ ಉಪನಿರ್ದೇಶಕರವರ ಪತ್ರ ಸಂಖ್ಯೆ ಪಪೂಶಿ/ಉನಿಕ/ ಪಿಪಿ/ಕ್ರೀ.ಕೂ-2014/2014-15/320 ದಿನಾಂಕ 17/07/2014

2. ಮಂಡ್ಯ ಜಿಲ್ಲಾ ಉಪನಿರ್ದೇಶಕರ ಪತ್ರ ಸಂಖ್ಯೆ:ಪಪೂಶಿ/ಉನಿ-ಪಿಪಿ/ಕ್ರೀಡಾ ವೆಚ್ಚ/01/2013-14 ದಿನಾಂಕ: 18-07-2014

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2013-14 ನೇ ಸಾಲಿನ ರಾಜ್ಯಮಟ್ಟದ ಕಬ್ಬಡಿ ಕ್ರೀಡಾ ಸ್ಪರ್ದೆಯನ್ನು ನಡೆಸಲು ಕ್ರೀಡಾ ಖಾತೆಯಿಂದ ತಾಲ್ಲೂಕು ಮಟ್ಟಕ್ಕೆ 95,000-00 ಜಿಲ್ಲಾಮಟ್ಟಕ್ಕೆ ರೂ 50,000-00 ಮತ್ತು ರಾಜ್ಯಮಟ್ಟಕ್ಕೆ ರೂ 7,90,000-00 ಗಳನ್ನು ಆನ್‌ಲೈನ್ ಮುಖಾಂತರ ಬಿಡುಗಡೆ ಮಾಡಲಾಗಿತ್ತು, ಸದರಿ ಸ್ಪರ್ದೆಗಳನ್ನು ನಡೆಸಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಮತ್ತು ರಾಜ್ಯಮಟ್ಟದ ವೋಚರ್‌ಗಳನ್ನು ತಮ್ಮ ಉಲ್ಲೇಖ 1&2 ರ ಪತ್ರದನ್ವಯ ಸಲ್ಲಿಸಿರುತ್ತೀರಿ.

ಸದರಿ ವೋಚರ್‌ಗಳನ್ನು ಪರಿಶೀಲಿಸಲಾಗಿ 7 ತಾಲ್ಲೂಕು ಮಟ್ಟದ ಕ್ರೀಡಾ ಸ್ಪರ್ದೆಯ ವೋಚರ್‌ಗಳಲ್ಲಿ ಮದ್ದೂರು ತಾಲ್ಲೂಕು ಮಟ್ಟ ಕ್ರೀಡಾ ಸ್ಪರ್ದೆಯ ವೋಚರ್‌ಗಳನ್ನು ಸಲ್ಲಿಸಿರುವುದಿಲ್ಲ, ಮತ್ತು ರಾಜ್ಯಮಟ್ಟದ ವೋಚರ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ತಂಡದ ವ್ಯವಸ್ಥಾಪಕರಿಗೆ ತಪ್ಪಾಗಿ ವಿತರಿಸಿರುವ ಲೆಕ್ಕಪತ್ರಗಳ ಬಗ್ಗೆ ಹಾಗೂ ಮದ್ದೂರು ತಾಲ್ಲೂಕು ಕ್ರೀಡಾ ಸ್ಪರ್ದೆಯ ವೋಚರ್‌ಗಳನ್ನು ಕೇಂದ್ರ ಕಚೇರಿ ಖುದ್ದಾಗಿ ತಲುಪಿಸಿ ಲೆಕ್ಕ ಪತ್ರಗಳನ್ನು ಇತ್ಯರ್ಥ ಪಡಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ/ಕ್ರೀಡೆ/ಯುಯು/ತಾರಾಜಿ/2014-15

ನಿರ್ದೇಶಕರ ಕಛೇರಿ,
ಪದವಿಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ:- 14/10-09-2014.

ಗೆ:

ಉಪನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ
ತುಮಕೂರು ಜಿಲ್ಲೆ
ತುಮಕೂರು

ಮಾನ್ಯರೆ:

ವಿಷಯ: 2013-14 ರಾಜ್ಯಮಟ್ಟದ ಘುಟ್‌ಬಾಲ್ ಕ್ರೀಡಾ ಸ್ಪರ್ದೆಯ ಹಾಗೂ ಜಿಲ್ಲಾಮಟ್ಟದ ಹಾಗೂ ತಾಲ್ಲೂಕು ಮಟ್ಟದ ಕ್ರೀಡಾ ಸ್ಪರ್ದೆಗಳ ಲೆಕ್ಕ ಪತ್ರಗಳ ಬಗ್ಗೆ,

ಉಲ್ಲೇಖ: ತಮ್ಮ ಕಚೇರಿ ಪತ್ರ ಸಂಖ್ಯೆ:ಪಪೂಶಿಇ/ಉನಿಯುಯುಕ್ರೀಡೆ/ಲೆಪತ್ರ/ 2013-14/ ದಿನಾಂಕ: 20-11-2013

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2013-14 ನೇ ಸಾಲಿನ ರಾಜ್ಯಮಟ್ಟದ ಘುಟ್‌ಬಾಲ್ ಕ್ರೀಡಾ ಸ್ಪರ್ದೆಯನ್ನು ನಡೆಸಲು ಕ್ರೀಡಾ ಖಾತೆಯಿಂದ ತಾಲ್ಲೂಕು ಹಾಗೂ ಜಿಲ್ಲಾಮಟ್ಟ ಮತ್ತು ರಾಜ್ಯಮಟ್ಟಕ್ಕೆ ರೂ 11,05,000-00 ಗಳನ್ನು ಆನ್‌ಲೈನ್ ಮುಖಾಂತರ ಬಿಡುಗಡೆ ಮಾಡಲಾಗಿತ್ತು, ಸದರಿ ಸ್ಪರ್ದೆಗಳನ್ನು ನಡೆಸಿ ರೂ 9,12,987-00 ಗಳನ್ನು ಖರ್ಚು ಮಾಡಿ ಉಳಿದ ರೂ 1,91,578ಗಳನ್ನು ಬೇಡಿಕೆ ಹುಂಡಿ ಮುಖಾಂತರ ಉಲ್ಲೇಖ ಪತ್ರದನ್ವಯ ಸಲ್ಲಿಸಿರುತ್ತೀರಿ.

ಸದರಿ ವೋಚರ್‌ಗಳನ್ನು ಪರಿಶೀಲಿಸಲಾಗಿ ರೂ 11,606 ರೂಗಳು ತಪ್ಪಾಗಿ ವಿತರಣೆಯಾಗಿದ್ದು, ಹಾಗೂ ನಿಮ್ಮ ಕಚೇರಿಯ ಸಿಬ್ಬಂದಿಗಳಿಗೆ ರೂ 5,000-00 ಗಳ ಸಂಭಾವನೆಯನ್ನು ನೀಡಿರುವ ವೋಚರ್‌ಗಳನ್ನು ಸಲ್ಲಿಸಿರುವುದಿಲ್ಲ, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದ ಲೆಕ್ಕಪತ್ರಗಳ ವೋಚರ್‌ಗಳಿಗೆ ಉಪನಿರ್ದೇಶಕರು ದೃಡೀಕರಿಸಬೇಕಾಗಿರುವುದರಿಂದ ಎಲ್ಲಾ ವೋಚರ್‌ಗಳನ್ನು ಕೇಂದ್ರ ಕಚೇರಿ ಖುದ್ದಾಗಿ ಬಂದು ದೃಢೀಕರಿಸಿ ಹಾಗೂ ತಪ್ಪಾಗಿ ವಿತರಣೆಯಾಗಿರುವ ಲೆಕ್ಕ ಪತ್ರಗಳನ್ನು ಇತ್ಯರ್ಥ ಪಡಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ:ಪಪೂಶಿಇ/ಶೈಶಾ/ಕ್ರೀಡೆ/27/ಹ.ಬಿ/2013-14

ನಿರ್ದೇಶಕರ ಕಛೇರಿ,
ಪದವಿಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 11-09-2014.
12-09-2014

ಗೆ;
ಉಪನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ,
ಧಾರವಾಡ ಜಿಲ್ಲೆ, ಧಾರವಾಡ

ಮಾನ್ಯರೆ:

ವಿಷಯ: 2013-14ನೇ ಸಾಲಿನಲ್ಲಿ ನಡೆಸಿದ ರಾಜ್ಯಮಟ್ಟದ ಅಥ್ಲೇಟಿಕ್ ಕ್ರೀಡಾ ಕೂಟದ ಲೆಕ್ಕಪತ್ರಗಳ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಪಪೂಶಿಇ/ಉ.ನಿ.ಜೆಜೆ/ಇ3/ಕ್ರೀಡೆ/2013-14/190 ದಿನಾಂಕ:23-06-2014.

***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ 2013-14 ನೇ ಸಾಲಿನಲ್ಲಿ ಆಥ್ಲೇಟಿಕ್ ಕ್ರೀಡಾ ಸ್ಪರ್ಧೆಯನ್ನು ರಾಜ್ಯಮಟ್ಟದಲ್ಲಿ ನಡೆಸಲು ಇಲಾಖೆಯ ಕ್ರೀಡಾ ನಿಧಿಯಿಂದ 32,49,200-00 ರೂಗಳನ್ನು ಬಿಡುಗಡೆ ಮಾಡಲಾಗಿತ್ತು, ನೀವು ಆಥ್ಲೇಟಿಕ್ ಕ್ರೀಡಾ ಸ್ಪರ್ಧೆಯನ್ನು ರಾಜ್ಯಮಟ್ಟದಲ್ಲಿ ನಡೆಸಿ ಸ್ಪರ್ಧೆಗೆ ಬಿಡುಗಡೆ ಮಾಡಿದ್ದ ಹಣದಲ್ಲಿ 21,25,000-00 ರೂಗಳನ್ನು ಖರ್ಚು ಮಾಡಿ ಮೇಲಿನ ಉಲ್ಲೇಖ ಪತ್ರದ ಜೊತೆ ಲೆಕ್ಕ ಪತ್ರಗಳನ್ನು ಸಲ್ಲಿಸಿರುತ್ತೀರಿ, ಲೆಕ್ಕ ಪತ್ರಗಳನ್ನು ಪರಿಶೀಲಿಸಲಾಗಿ ಕ್ರೀಡಾ ಸ್ಪರ್ದಿಗಳಿಗೆ ಹಾಗೂ ತಂಡದ ಮೇಲ್ವಿಚಾರಕರಿಗೆ ನೀಡಿರುವ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ಬಿಲ್ಲುಗಳಲ್ಲಿ ಈ ಕೆಳಕಂಡ ಜಿಲ್ಲೆಗಳ ಬಿಲ್ಲುಗಳಲ್ಲಿ ಜಿಲ್ಲೆಗಳಿಂದ ಕಳುಹಿಸಿರುವ ಜಿಲ್ಲಾ ಉಪ ನಿರ್ದೇಶಕರ ಪಟ್ಟಿ ಇರುವುದಿಲ್ಲ.

1. ಬೆಂಗಳೂರು ಉತ್ತರ
2. ಬೆಂಗಳೂರು ದಕ್ಷಿಣ
3. ಬೆಂಗಳೂರು ಗ್ರಾಮಾಂತರ
4. ರಾಮನಗರ
5. ಬಳ್ಳಾರಿ
6. ಚಿತ್ರದುರ್ಗ
7. ದಾವಣಗೆರೆ
8. ಚಿಕ್ಕಬಳ್ಳಾಪುರ
9. ಕೋಲಾರ
10. ಶಿವಮೊಗ್ಗ
11. ತುಮಕೂರು.

ಈ ಮೇಲ್ಕಂಡ 11 ಜಿಲ್ಲೆಗಳ ತಂಡಗಳಿಗೆ ಯಾವುದೇ ಪೂರಕ ದಾಖಲೆಗಳಿಲ್ಲದೆ 7,24,940-00, ರೂಗಳನ್ನು ವಿತರಿಸಿರುತ್ತೀರಿ. ಹಾಗೂ ಸಂಘಟನಾ ವೆಚ್ಚಕ್ಕೆ 1,25,000-00 ಗಳನ್ನು ನಿಗಧಿಪಡಿಸಿದ್ದರು ಸಹ 2,14,300-00 ರೂ ಗಳನ್ನು ಖರ್ಚು ಮಾಡಿರುವುದಾಗಿ ಲೆಕ್ಕ ಪತ್ರಗಳನ್ನು ನೀಡಿರುತ್ತೀರಿ. ಆದ್ದರಿಂದ 11 ಜಿಲ್ಲೆಗಳ ತಂಡಗಳಿಗೆ ವಿತರಿಸಿರುವ ಮೊತ್ತ 7,24,940-00 ಹಾಗೂ ಸಂಘಟನಾ ವೆಚ್ಚಕ್ಕಾಗಿ ಹೆಚ್ಚುವರಿ ಮಾಡಿರುವ ಮೊತ್ತ 89,300-00 ರೂಗಳು ಒಟ್ಟು 8,14,240-00 ರೂಗಳು ತಪ್ಪಾಗಿ ವಿತರಿಸಿರುವುದರಿಂದ ಸದರಿ ಮೊತ್ತವನ್ನು ಏಳು ದಿನಗಳ ಒಳಗಾಗಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಈ ಹೆಸರಿಗೆ ಬೇಡಿಕೆ ಹುಂಡಿಯನ್ನು ಪಡೆದು ಶಾಖಾಧಿಕಾರಿಗಳು (ಕ್ರೀಡೆ) ಕೊಠಡಿ ಸಂಖ್ಯೆ:10, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವಂ 18ನೇ ಅಡ್ಡರಸ್ತೆ, ಬೆಂಗಳೂರು, ಈ ವಿಳಾಸಕ್ಕೆ ಕಳುಹಿಸಿ ಲೆಕ್ಕ ಪತ್ರಗಳನ್ನು ಇತ್ಯರ್ಥಗೊಳಿಸಲು ಸೂಚಿಸಿದೆ. ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ತಮ್ಮ ವಿಶ್ವಾಸಿ

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ

4087
18/9/14